# ವಿಜಯಪುರ ಜಿಲ್ಲಾ ಪೋಲೀಸ್ ಇಲಾಖೆ ನೌಕರರ ಪತ್ತಿನ ಸಹಕಾರಿ ಸಂಘ ನಿ., ವಿಜಯಪುರ

ಗ್ಯಾಂಗಬಾವಡಿ ರೋಡ, ವಿಜಯಪುರ-586101

ಸಂಖ್ಯೆ: ಡಿ.ಪಿ.ಸಿ.ಸಿ./ಆಡಳಿತ/ಸಿಬ್ಬಂದಿ/ನೇಮಕಾತಿ/2023-24 ದಿನಾಂಕ: 12.01.2024

## ನೇಮಕಾತಿ ಪ್ರಕಟಣೆ

ಈ ಕೆಳಗೆ ನಮೂದಿಸಿದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಅಭ್ಯರ್ಥಿಗಳು ಸಂಘದಿಂದ ಪಡೆದ ಅಧಿಕೃತ ಅರ್ಜಿ ಮುಖಾಂತರ ಅರ್ಜಿ ಸಲ್ಲಿಸಬೇಕು.

| ಅ.ನಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವೇತನ ಶ್ರೇಣಿ |
|---|---|---|---|
| 1. | ಲೆಕ್ಕಿಗ/ಅಕೌಂಟೆಂಟ್/ಗಣಕಯಂತ್ರ ನಿರ್ವಹಣೆಗಾರ | 1 | 25800-51400 |
| 2. | ಕ್ಲರ್ಕ್/ಕಂಪ್ಯೂಟರ್ ಆಪರೇಟರ್ | 1 | 23500-47650 |
| 3. | ಅಟೆಂಡರ್/ಸಿಪಾಯಿ | 1 | 18600-32600 |

1) ವಿದ್ಯಾರ್ಹತೆ : ಲೆಕ್ಕಿಗ / ಅಕೌಂಟೆಂಟ್/ ಗಣಕ ಯಂತ್ರ ನಿರ್ವಹಣೆಗಾರ
ಕರ್ನಾಟಕ ರಾಜ್ಯ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ಎಲ್ಲ ಸೆಮಿಸ್ಟರ್‌ಗಳಲ್ಲಿ ಸರಾಸರಿ 60 % ಅಂಕಗಳನ್ನು ಪಡೆದಿರಬೇಕು. ವಾಣಿಜ್ಯ /ಸಹಕಾರ ಪದವಿ ಪಡೆದಿರಬೇಕು. ಕಂಪ್ಯೂಟರ್ ಆಪರೇಶನ್ಸ್ ಮತ್ತು ಅಪ್ಲಿಕೇಶನ್ಸ್ ಜೊತೆಗೆ ಟ್ಯಾಲಿ ಕೋರ್ಸ್‌ನ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು.

2) ಕ್ಲರ್ಕ್/ ಕಂಪ್ಯೂಟರ್ ಆಪರೇಟರ್: ದ್ವಿತೀಯ ಪಿಯುಸಿಯಲ್ಲಿ ಕನಿಷ್ಠ 60% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕಂಪ್ಯೂಟರ್ ಆಪರೇಶನ್ಸ್ ಮತ್ತು ಅಪ್ಲಿಕೇಶನ್ಸ್ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು.

3) ಅಟೆಂಡರ್ / ಸಿಪಾಯಿ: ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. ಕನ್ನಡದ ಓದು ಬರಹ ಜ್ಞಾನ ಹೊಂದಿರಬೇಕು.

4) ಆಯ್ಕೆ ವಿಧಾನ : ಲೆಕ್ಕಿಗ / ಅಕೌಂಟಂಟ್ / ಗಣಕ ಯಂತ್ರ ನಿರ್ವಹಣೆಗಾರ ಹಾಗೂ ಕ್ಲರ್ಕ್ / ಕಂಪ್ಯೂಟರ್ ಆಪರೇಟರ್ ಹುದ್ದೆಗಳಿಗೆ
1. ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:20 ರ ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಕರೆಯಲಾಗುವುದು.
2. ಬಾಹ್ಯ ಮೂಲಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅದನ್ನು ಆಧರಿಸಿ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳು 15. 3. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡ 85 ಕ್ಕೆ ಲೆಕ್ಕ ಮಾಡಿ ಪ್ರಾಪ್ತವಾಗುವ ಅಂಕಗಳ ಶೇಕಡಾವಾರು ಪ್ರಮಾಣದ ಜೊತೆಗೆ ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಕೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಿ, ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.
4. ಲೆಕ್ಕಿಗ / ಅಕೌಂಟಂಟ್ / ಗಣಕ ಯಂತ್ರ ನಿರ್ವಹಣೆಗಾರ ಹಾಗೂ ಕ್ಲರ್ಕ್ / ಕಂಪ್ಯೂಟರ್ ಆಪರೇಟರ್ ಹುದ್ದೆಗೆ ನಡೆಸುವ ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 100 ಅಂಕಗಳ ಹೊಂದಿರುವ ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತವೆ.

| | |
|---|---|
| ಪ್ರಥಮ ಪತ್ರಿಕೆ: ಕನ್ನಡ ಭಾಷೆ-50, ಸಾಮಾನ್ಯ ಇಂಗ್ಲೀಷ ಭಾಷೆ-25, ಸಾಮಾನ್ಯ ಜ್ಞಾನ-25. ಅಂಕಗಳು, | 100 ಅಂಕಗಳು |
| ದ್ವಿತೀಯ ಪತ್ರಿಕೆ: ಸಹಕಾರ ವಿಷಯ -50, ಭಾರತದ ಸಂವಿಧಾನ-25 ಹಾಗೂ ಸಮಾಜ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ-25 | 100 ಅಂಕಗಳು |
| ಒಟ್ಟು | 200 ಅಂಕಗಳು |

ಅ) ಅಟೆಂಡರ್/ ಪಿವುನ್ ಹುದ್ದೆಗೆ ನೇರ ನೇಮಕಾತಿಯನ್ನು ಸಂದರ್ಶನ (ಮೌಖಿಕ) ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

**05. ವಯೋಮಿತಿ**

ಅಭ್ಯರ್ಥಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷಗಳಾಗಿರಬೇಕು. ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ರಿತ್ಯಾ ಗರಿಷ್ಠ ವಯೋಮಿತಿಗೆ ಒಳಪಟ್ಟಿರಬೇಕು. ಸಾಮಾನ್ಯ ವರ್ಗ-35 ವರ್ಷ.ಪ್ರವರ್ಗ-2(ಎ),2(ಬಿ),3 (ಬಿ) 38 ವರ್ಷ. ಪ.ಜಾ/ಪ.ಪಂ ಹಾಗೂ ಇತರೆ ಹಿಂದುಳಿದ ವರ್ಗಗಳ ವರ್ಗ-1 ಕ್ಕೆ ಸೇರಿರುವ ವ್ಯಕ್ತಿಗಳಾಗಿದ್ದಲ್ಲಿ-40 ವರ್ಷ.

**06. ಅರ್ಜಿ ಸಲ್ಲಿಸುವ ವಿಧಾನ**

**ನೇಮಕಾತಿ ಅರ್ಜಿ ಮಾಹಿತಿಯೊಂದಿಗೆ ಶುಲ್ಕ 200/- ಹಾಗೂ ಪರೀಕ್ಷಾ ಶುಲ್ಕ** ಸಾಮಾನ್ಯ ಅಭ್ಯರ್ಥಿಗಳಿಗೆ ರೂ. **1000-00** ಹಾಗೂ ಪ.ಜಾ. /ಪ.ಪಂ. ಅಭ್ಯರ್ಥಿಗಳಿಗೆ ರೂ. 500-00 ನಗದು / ಡಿ.ಡಿ. ಮುಖಾಂತರ ಭರಣಾ ಮಾಡುವುದು ಈ ಹಣವನ್ನು ಯಾವದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವದಿಲ್ಲ.

**07.** ಸಂಘದಿಂದ ಪಡೆದ ಅಧಿಕೃತ ಅರ್ಜಿ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :31-01-2024 ಸಾಯಂಕಾಲ 5-30 ರ ಒಳಗಾಗಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.

ಸಹಿ/- **ಚೇರಮನ್‌ರು,**
ಸಿಬ್ಬಂದಿ ನೇಮಕಾತಿ ಉಪ ಸಮಿತಿ ವಿಜಯಪುರ
ಜಿಲ್ಲಾ ಪೊಲೀಸ್ ಇಲಾಖೆ, ನೌಕರರ ಪತ್ತಿನ ಸಹಕಾರಿ ಸಂಘ ನಿ., ವಿಜಯಪುರ